6. ಆಹಾರಧಾನ್ಯಗಳ ಸಾಗಾಣಿಕೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರಧಾನ್ಯಗಳ ಎತ್ತುವಳಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.
7. ರೂಟ್ ಮ್ಯಾಪ್ಸ್‌ಗಳನ್ನು ತಯಾರಿಸಿದೆ. ಅದರಂತೆ ಆಹಾರ ನಿರೀಕ್ಷಕರು ವಾಹನಗಳ ಜೊತೆ ಹೋಗುತ್ತಿರುತ್ತಾರೆ.
8. ಕಾರ್ಯ ನಿರ್ವಾಹಕ ಸಿಬ್ಬಂದಿಗೆ ಇಂತಿಷ್ಟು ತಪಾಸಣೆಗಳನ್ನು ಮಾಡಲು ನಿಗಧಿಪಡಿಸಲಾಗಿದೆ.
9. ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರುಗಳಿಗೆ ತಪಾಸಣೆ ಮಾಡಲು ಸೂಚಿಸಿದೆ.
10. ನ್ಯಾಯಬೆಲೆ ಅಂಗಡಿಗಳ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಆಹಾರಧಾನ್ಯಗಳ ವಿತರಣೆ ಮೇಲ್ವಿಚಾರಣೆ ನೋಡಿಕೊಳ್ಳಲು ವಿಚಕ್ಷಣಾ ಸಮಿತಿಗಳನ್ನು ರಚಿಸಲು ಸೂಚಿಸಿದೆ.

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆ.ಎಲ್.ಇ. ಕಾಲೇಜಿಗೆ ಬಿ.ಡಿ.ಎ. ಯಿಂದ ನಿವೇಶನ

2420 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನವರಂಗ್ ಚಿತ್ರಮಂದಿರದ ಬಳ ಕೆ.ಎಲ್.ಇ. ಕಾಲೇಜಿಗೆ ನೀಡಲಾಗಿರುವ ಬಿ.ಡಿ.ಎ. ನಿವೇಶನದ ಅಳತೆ ಎಷ್ಟು?

ಆ) ನಿವೇಶನವನ್ನು ನೀಡಿರುವ ಉದ್ದೇಶ ಏನು?

ಇ) ಸದರಿ ಕಾಲೇಜಿನ ವ್ಯವಸ್ಥಾಪಕ ಮಂಡಳಿಯು ಈ ನಿವೇಶನದಲ್ಲಿ ಸುತ್ತಲೂ ಗೋಡೆಯನ್ನು ಕಟ್ಟಿರುವುದರಿಂದ ಈ ಬಡಾವಣೆಯ ಸಹಸ್ರಾರು ಯುವಕರು ಕ್ರೀಡಾಂಗಣದ ಉಪಯೋಗದಿಂದ ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ)

ಕ್ರಮ	ಬಡಾವಣೆ	ಸಿ.ಎ ನಿವೇಶನದ ಅಳತೆ	ವಿಸ್ತೀರ್ಣ
1)	ರಾಜಾಜಿನಗರ 2ನೇ ಬ್ಲಾಕ್	ಪೂರ್ವ ಪಶ್ಚಿಮಕ್ಕೆ $\frac{360 + 25}{2}$ ಉತ್ತರ ದಕ್ಷಿಣಕ್ಕೆ 450	86,625 ಚ.ಅ

ಕ್ರಮ	ಬಡಾವಣೆ	ಸಿ.ಎ ನಿವೇಶನದ ಅಳತೆ	ವಿಸ್ತೀರ್ಣ
2)	ರಾಜಾಜಿನಗರ 2ನೇ ಬ್ಲಾಕ್	ಪೂರ್ವ ಪಶ್ಚಿಮಕ್ಕೆ $\frac{180 + 234}{2}$ ಉತ್ತರ ದಕ್ಷಿಣಕ್ಕೆ $\frac{380 + 400}{2}$	80,730 ಚ.ಅ
3)	-ಡಿಟೋ-	ಪೂರ್ವ ಪಶ್ಚಿಮಕ್ಕೆ 100 ಉತ್ತರ ದಕ್ಷಿಣಕ್ಕೆ 80	8,000 ಚ.ಅ
4)	-ಡಿಟೋ-	ಪೂರ್ವ ಪಶ್ಚಿಮಕ್ಕೆ $\frac{110 + 100}{2}$ ಉತ್ತರ ದಕ್ಷಿಣ $\frac{126 + 190}{2}$	16,590 ಚ.ಅ

ಅ) ಕೆ.ಎಲ್.ಇ. ಕಾಲೇಜಿನ ಉಪಯೋಗಕ್ಕಾಗಿ

ಇ) ಬಂದಿಲ್ಲ. ಆದರೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ವಿದ್ಯುತ್ ಕ್ಷೇತ್ರದ ಸುಧಾರಣೆ ಕುರಿತು

2421 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯುತ್ ಕ್ಷೇತ್ರದ ಸುಧಾರಣೆಗಾಗಿ ಯಾವುದಾದರೂ ಸಮಿತಿಯನ್ನು ನೇಮಕ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಸಮಿತಿ ತನ್ನ ಕಾರ್ಯವನ್ನು ಪ್ರಾರಂಭಿಸಿದೆಯೇ ಮತ್ತು ತನ್ನ ವರದಿಯನ್ನು ಸರ್ಕಾರಕ್ಕೆ ಯಾವಾಗ ಸಲ್ಲಿಸಲಿದೆ?